

ಡಾ.ವಿನೋದ ಛೆಬ್ಬಿ

ದಂಪತಿ ಎಂದರೆ ನಾವು ಅಂದುಕೊಂಡ ವಿವಾಹಿತ ಜೋಡಿಗಳು ಮಾತ್ರವೆ? ಅಥವಾ ಇನ್ನಾರಾದರೂ ಒಳಗೊಳ್ಳುತ್ತಾರೆಯೆ?

# ದಂಪತಿ ಎಂದರೆ ಯಾರು?

2

ದಂಪತಿ ಅಂದರೆ ಯಾರು ಅಂತ ಯಾರಿಗೆ ಗೊತ್ತಿಲ್ಲ? ದಂಪತಿ ಎಂದರೆ ಒಂದು ಗಂಡು ಹಾಗೂ ಒಂದು ಹೆಣ್ಣು ಒಟ್ಟಿಗೆ ಸೇರಿ, ಪರಸ್ಪರ ವಿವಾಹ ಬಂಧನಕ್ಕೆ ಒಳಗಾಗಿ, ಒಂದೇ ಮನೆಯಲ್ಲಿದ್ದು ಸಂಸಾರ ನಡೆಸುವವರು, ಹಾಗೂ ಪರಸ್ಪರ ಲೈಂಗಿಕವಾಗಿ ಬದ್ಧತೆಯಿಂದ ಇರುವವರು. ಅಷ್ಟೇ ಅಲ್ಲವೆ?

ಈ ವ್ಯಾಖ್ಯೆ ಸರಿಯೇ. ಆದರೆ ದಶಕಗಳ ಕಾಲ ಒಟ್ಟಿಗಿದ್ದೂ ಲೈಂಗಿಕ ಕ್ರಿಯೆಗೆ ಬದ್ಧತೆ ಒತ್ತಟ್ಟಿಗಿರಲಿ, ಲೈಂಗಿಕ ಸಂಪರ್ಕ ಆಗಿದೆಯೋ ಆಗಿಲ್ಲವೋ ಒಂದೂ ಗೊತ್ತಾಗದಿರುವ, ಆದರೂ ಒಟ್ಟಿಗೆ ಬದುಕುತ್ತಿರುವ ಸುಮಾರು ಜೋಡಿಗಳಿವೆ. ಸಮಾಜ ಇವರನ್ನು ದಂಪತಿ ಎಂದು ಒಪ್ಪಿಕೊಂಡರೂ ಇವರು ಪರಸ್ಪರರಿಗೆ ಅಪರಿಚಿತರಾಗಿಯೇ ಉಳಿದಿದ್ದಾರೆ. ಇಲ್ಲಿ ನನ್ನ ಸಂಬಂಧಿಕರ ನೆನಪು ಬರುತ್ತಿದೆ.

ಮಧ್ಯಮ ವರ್ಗದ, ಮಕ್ಕಳಿಲ್ಲದ ಈ ದಂಪತಿ ಸುಮಾರು ನಾಲ್ಕು ದಶಕಗಳ ದಾಂಪತ್ಯದಲ್ಲಿ ಪರಸ್ಪರ ನಕ್ಕಿದ್ದನ್ನು, ದೇವಸ್ಥಾನ ಬಿಟ್ಟು ಬೇರಾವುದೇ ಉದ್ದೇಶಕ್ಕೆ ಜೊತೆಯಾಗಿ ಹೊರಗೆ ಹೋಗಿದ್ದನ್ನು ಯಾರೂ ಕಂಡೇ ಇಲ್ಲ. ಕೊನೆಗೊಂದು ದಿನ ಗಂಡ ತೀರಿಕೊಂಡಾಗ ಅವನ ಶವವನ್ನು ಮನೆಯ ಹಜಾರದಲ್ಲಿರುವ ಒಂದು ಕೋಣೆಯಲ್ಲಿ ಇಡಲಾಗಿತ್ತು. ಅಂತ್ಯದರ್ಶನಕ್ಕೆ ಜನ ಬರುತ್ತಿದ್ದಾಗ ಹೆಂಡತಿ ಮನೆಯ ಹೊರಗಿನ ಕಟ್ಟೆಯ ಮೇಲೆ ಮಂಡಿಯ ಮೇಲೆ ಗದ್ದವೂರಿ ಒಂಟಿಯಾಗಿ ಕುಳಿತು, ಒಂದು ತೊಟ್ಟೂ ಕಣ್ಣೀರಿಲ್ಲದೆ ಶೂನ್ಯ ದೃಷ್ಟಿ ಬೀರುತ್ತ ಶೂನ್ಯವಾಗಿದ್ದಳು. ಅಪರಿಚಿತರೊಬ್ಬರು ಆಕೆಯನ್ನು ನೋಡಿ, 'ತೀರಿಕೊಂಡವರಿಗೆ ನೀವೇನು ಆಗಬೇಕು?' ಎಂದಾಗ ಒಂಚೂರೂ ಮಿಸುಕದೆ ಆಕೆ ಉಸುರಿದ್ದು: 'ಏನೇನೋ ಆಗಬೇಕಾಗಿತ್ತು. ಆದರೆ ಏನೂ ಆಗಲಿಲ್ಲ.'

ನಮ್ಮ ಪ್ರಕಾರ ಇದೂ ಒಂದು ದಾಂಪತ್ಯ!

ಇದು 30 ವರ್ಷದ ಹಿಂದಿನ ಮಾತಾಯಿತು. ಈಗ ಕಾಲ ಬದಲಾಗಿದೆ. ಸಂಬಂಧಗಳು ನಾನಾ ರೂಪ ಧಾರಣೆ ಮಾಡಿವೆ. ಇಲ್ಲಿ ಗಮನಿಸಿ:

ವಿರಳ ಭೇಟಿಯ ಜೋಡಿ: ಉದ್ಯೋಗದ ನಿಮಿತ್ತ ಗಂಡಹೆಂಡಿರು ಬೇರೆಬೇರೆ ಊರುಗಳಲ್ಲಿ ಕೆಲಸ ಮಾಡುತ್ತಾರೆ. ತಿಂಗಳಿಗೆ ಒಂದು ಅಥವಾ ಹೆಚ್ಚೆಂದರೆ ಎರಡು ಸಲ ಒಟ್ಟಿಗೆ ಸೇರುತ್ತಾರೆ – ಅದೂ ಎರಡು– ಮೂರು ದಿನ ಮಾತ್ರ. ಅಂದರೆ ವರ್ಷಕ್ಕೆ ಸರಾಸರಿ 25 ದಿನ ಮಾತ್ರ. ಇನ್ನು ಕೆಲವರು ಪರದೇಶದಲ್ಲಿದ್ದು ವರ್ಷಕ್ಕೆ ಒಂದು ತಿಂಗಳು ಬಂದುಹೋಗುತ್ತಾರೆ. ಸಾಕಾಗದ್ದಕ್ಕೆ ಈ ವ್ಯವಸ್ಥೆ ವರ್ಷಗಟ್ಟಲೆ ಮುಂದುವರಿಯುತ್ತದೆ. ವಿವಾಹಬಾಹಿರ ಸಂಬಂಧಗಳು ಇವರಲ್ಲಿ ಅತಿ ಹೆಚ್ಚಿರುವುದು ಸಹಜ. ಇಂಥವರು ದಾಂಪತ್ಯ ನಡೆಸುವುದು ಯಾರೊಂದಿಗೆ? ಇವರ ಪರಗಮನವನ್ನು ದಾಂಪತ್ಯಕ್ಕೆ ದ್ರೋಹ ಎನ್ನಲಾದೀತೆ?

ಒಂದೂವರೆ ಜೋಡಿ: ಒಬ್ಬನು ತಾನು ಪ್ರೇಮಿಸುವ ಹುಡುಗಿಯನ್ನು ವಿಜಾತಿ ಅಥವಾ ಇನ್ನಿತರ ಕಾರಣಗಳಿಂದ ತನ್ನ ಹಿರಿಯರಿಂದ ಬಚ್ಚಿಟ್ಟು ಮದುವೆಯಾಗುತ್ತಾನೆ. ತಂದೆಯೂ ಆಗುತ್ತಾನೆ. ಇದನ್ನು ತಿಳಿಯದ ಹಿರಿಯರು ಅವನಿಗೆ ಇನ್ನೊಂದು ಮದುವೆ ಮಾಡುತ್ತಾರೆ. ಈಗ ಅವನ ನಿಜವಾದ ಹೆಂಡತಿ ಯಾರು? ಇಂಥ ಒಂದೂವರೆ ದಾಂಪತ್ಯಗಳು ವಿರಳ ನಿಜ, ಆದರೆ ಕಾನೂನನ್ನು ಬದಿಗಿಟ್ಟು ಯೋಚಿಸುವುದಾದರೆ, ಇಂಥ ಪ್ರಸಂಗಗಳಲ್ಲಿ ಗಂಡ ಯಾರೊಂದಿಗೆ 'ಹೆಚ್ಚು' ದಾಂಪತ್ಯ ನಡೆಸುತ್ತಿದ್ದಾನೆ?

ಸಹಜೀವಿ (live-in) ಜೋಡಿ: ಒಂದೇ ಉದ್ಯೋಗ ಅಥವಾ ಅಧ್ಯಯನದಲ್ಲಿ ತೊಡಗಿರುವ, ಅಥವಾ ಒಂದೇ ರಾಜ್ಯದಿಂದ ಬಂದ ಇಬ್ಬರು ಪರಸ್ಪರ ಒಪ್ಪಿ, ಮದುವೆಯಾಗದೆ ಸಹಜೀವನ ನಡೆಸುತ್ತಾರೆ. ಈ ಸಂಬಂಧ ತಾತ್ಕಾಲಿಕವಾಗಿ ಇರಬಹುದು, ಅಥವಾ ಮುಂದೆ ಕಾಯಂ ಆಗಬಹುದು. ಆಪ್ತಸಲಹೆಗಾಗಿ ನನ್ನ ಹತ್ತಿರ ಬಂದ ಇವರನ್ನೂ ದಂಪತಿ ಎನ್ನಬಹುದಲ್ಲವೆ?

ನಿರ್ಲಿಂಗಿ ಜೋಡಿ: ಲೈಂಗಿಕ ಕ್ರಿಯೆ ಬೇಡದಿರುವ, ಆದರೆ ಸಾಹಚರ್ಯ ಬೇಕಾಗುವ ದಾಂಪತ್ಯಗಳು ಧಾರಾಳವಾಗಿವೆ. ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿ ಇಲ್ಲದ ಇಬ್ಬರು ಮುಂಚೆಯೇ ಮಾತಾಡಿಕೊಂಡು, ಒಪ್ಪಿ ಮದುವೆಯಾಗುತ್ತಾರೆ. ಇಬ್ಬರೂ ಮುಂದೆ ಮಗುವನ್ನು ದತ್ತು ತೆಗೆದುಕೊಳ್ಳಬಹುದು, ಅಥವಾ ಮಕ್ಕಳಿಲ್ಲದೆ ಹಾಗೆಯೇ ಇರಬಹುದು.

ಕಿರುಚಿತ್ರ ತಾರೆಯೊಬ್ಬಳು ನನ್ನ ಸಹಾಯ ಕೇಳಿದ್ದಾಳೆ: ನಾನು ಭಾವೀ ಪತಿಯಿಂದ ಆರ್ಥಿಕ ಸುಭದ್ರತೆಯನ್ನೂ ಅನ್ಯೋನ್ಯತೆಯನ್ನೂ ಬಯಸುತ್ತೇನೆ. ನಾನು ಹಲವಾರು ಗಂಡುಗಳನ್ನು ಕಂಡಿದ್ದೇನೆ. ನನ್ನನ್ನು ಅರ್ಥಮಾಡಿಕೊಳ್ಳುವವರಿಗೆ ಹಣದ ಕೊರತೆ ಎದ್ದು ಕಾಣುತ್ತದೆ, ಹಾಗೂ ನನಗಾಗಿ ಸಾಕಷ್ಟು ಹಣ ಖರ್ಚುಮಾಡಲು ತಯಾರಿರುವವರಿಗೆ ಹೃದಯವಂತಿಕೆಯ ಕೊರತೆ ಎದ್ದುಕಾಣುತ್ತಿದೆ. ಹಾಗಾಗಿ ನನ್ನ ಬೇಡಿಕೆ ಇದು: ಹೆಸರಿಗೆ ಹೆಂಡತಿಯೆಂದು ಸ್ವೀಕರಿಸಿ, ಹಾಸಿಗೆಯಲ್ಲಿ ದೂರವಿರುವ ಸಿರಿವಂತ ಸಲಿಂಗಕಾಮಿ ಗಂಡು ಯಾರಾದರೂ ನಿಮಗೆ ಗೊತ್ತೆ? ಒಂದುವೇಳೆ ಈಕೆ ಸಲಿಂಗಿಯನ್ನು ಮದುವೆಯಾದರೆ ಇಬ್ಬರ ವಿವಾಹಬಾಹಿರ ಲೈಂಗಿಕ ಸಂಬಂಧಗಳಿಗೆ ಏನು ಅರ್ಥಹಚ್ಚೋಣ?

ಸಲಿಂಗಿ ಜೋಡಿ: ಬದ್ಧಸಂಬಂಧದ ಅಗತ್ಯವಿರುವ ಇಬ್ಬರು ಸಲಿಂಗಿಗಳು ಸೇರಿ ಬಾಳುತ್ತಾರೆ. (ಸಲಿಂಗಿ ಎಂದರೆ ಮೂಗು ಮುರಿಯುವವರಿಗೆ ಒಂದು ಮಾತು: ಸಲಿಂಗಕಾಮ ಅಸಹಜವಲ್ಲ, ವಿಕೃತಿಯೂ ಅಲ್ಲ. ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ದುಶ್ಚಟವೂ ಅಲ್ಲ. ಎಡಚರ ಸಹಜತೆಯು ಬಲಗೈ ಉಪಯೋಗಿಸುವವರಿಗೆ ಅರ್ಥವಾಗದಿರುವ ಹಾಗೆ ಕಟ್ಟಾ ಹೆರಲಿಂಗಿಗಳಿಗೆ ಸಲಿಂಗಿಗಳ ಕಾಮಸಂಬಂಧವು ಅರ್ಥವಾಗುವುದಿಲ್ಲ. ತಮಗೆ ಸರಿಕಂಡ ಲೈಂಗಿಕ ಬದುಕನ್ನು ಬದುಕಲು ಸಲಿಂಗಿಗಳಿಗೆ ಹಕ್ಕಿದೆ. ಹೀಗಾಗಿ ಹಲವಾರು ದೇಶಗಳಲ್ಲಿ ಇವರನ್ನು ಸಹಜವರ್ಗವೆಂದು ಗುರುತಿಸುತ್ತಾರೆ. ನಮ್ಮಲ್ಲೂ ಇದು ಕಾನೂನುಬದ್ಧವಾಗುವುದು ದೂರದಲ್ಲಿಲ್ಲ.) ಇವರಲ್ಲಿ ವಿಧ್ಯುಕ್ತ ವಿವಾಹ ಇಲ್ಲದಿದ್ದರೂ ಲೈಂಗಿಕ ಬದ್ಧತೆ ಹಾಗೂ ಅನ್ಯೋನ್ಯತೆ ಈ ಸಂಬಂಧದ ಜೀವಾಳ. ಕೆಲವರು– ಅದರಲ್ಲೂ ಹೆಚ್ಚಾಗಿ ಉಭಯಲಿಂಗೀ ಪುರುಷರು– ಮದುವೆ ಆದ ಹೆಣ್ಣಿನ ಜೊತೆಗಲ್ಲದೆ ಸಲಿಂಗೀ ಸಂಗಾತಿಯ ಜೊತೆಗೂ ಲೈಂಗಿಕವಾಗಿ ಕ್ರಿಯಾಶೀಲವಾಗಿರುತ್ತಾರೆ. ಇವರನ್ನೂ ದಂಪತಿಗಳ ಲೆಕ್ಕಕ್ಕೆ ಸೇರಿಸೋಣವೆ?

ಮುಕ್ತ ದಾಂಪತ್ಯ (free marriage): ಇಲ್ಲಿ ಇಬ್ಬರೂ ಧಾರಾಳವಾಗಿ ಹೊರಸಂಬಂಧ ಇಟ್ಟುಕೊಳ್ಳಬಹುದು. ಆದರೆ ಇದನ್ನು ಸಂಗಾತಿಯಿಂದ ಮುಚ್ಚಿಡಬಾರದಷ್ಟೆ.

ಬಹುಸಂಗಾತಿ ಜೋಡಿ: ಇನ್ನು ಕೆಲವರು ಇಬ್ಬಿಬ್ಬರೊಡನೆ ಏಕಕಾಲಕ್ಕೆ ಬದುಕು ನಡೆಸುತ್ತಿದ್ದಾರೆ. ಅಪರೂಪಕ್ಕೆ ಇಂಥ ಒಂದಿಬ್ಬರು ಮಹಿಳೆಯರನ್ನೂ ನಾನು ನೋಡಿದ್ದೇನೆ. ಈ ಸಂಬಂಧಗಳು ತಾತ್ಕಾಲಿಕವಾಗಿರಬಹುದು; ಅಥವಾ ವರ್ಷಗಟ್ಟಲೆ ಮುಂದುವರಿಯಬಹುದು. ನಮ್ಮಲ್ಲಿ ಮುಸ್ಲಿಮರು ಬಹುಪತ್ನಿತ್ವವನ್ನು ಅನುಸರಿಸಲು ಕಾನೂನಿನ ಅಡ್ಡಿಯಿಲ್ಲ. ಹಾಗೆಂದು ಮುಸ್ಲಿಮೇತರರಲ್ಲಿ ಬಹುಪತ್ನಿತ್ವವಿಲ್ಲವೆಂದಿಲ್ಲ.

ಇವನು ಹೆಂಡತಿಯ ಬಾಣಂತನಕ್ಕೆ ಸಹಾಯಕ್ಕಾಗಿ ಬಂದ ಆಕೆಯ ತಂಗಿಗೆ ಹತ್ತಿರವಾದ. ಆಕೆ ಗರ್ಭಿಣಿಯಾದದ್ದು ಬೆಳಕಿಗೆ ಬಂದಾಗ ಹೆತ್ತವರು ಆಕೆಯನ್ನು ಇವನಿಗೇ ಕೊಟ್ಟು ಮದುವೆ ಮಾಡಿದರು. ಈಗ ಅವನು ಅಕ್ಕ ತಂಗಿ ಇಬ್ಬರೊಡನೆ ಒಂದೇ ಮನೆಯಲ್ಲಿ ಸಂಸಾರ ಮಾಡುತ್ತಿದ್ದಾನೆ. ಇಬ್ಬರಿಂದಲೂ ಮಕ್ಕಳಿವೆ.

ಆಯಾ ವರ್ಗಗಳನ್ನು ಅವರವರದೇ ಆದ ಪ್ರತ್ಯೇಕ ಹಾಗೂ ವಿಶಿಷ್ಟ ಸಮಸ್ಯೆಗಳು ತಲೆತಿನ್ನುತ್ತವೆ. ಇವರ ಜೀವನ ಶೈಲಿಯು ಅಸಾಂಪ್ರದಾಯಕವಾಗಿದ್ದು, ಸಮಸ್ಯೆ–ಪರಿಹಾರದ ಮಾದರಿ ಇಲ್ಲದಿರುವುದರಿಂದ ಇಂಥವರಿಗೇ ಸಹಾಯದ ಅಗತ್ಯ ಹೆಚ್ಚಾಗಿರುತ್ತದೆ – ಹಾಗಾಗಿ ನಾನು ನಡೆಸುವ ದಾಂಪತ್ಯ ಚಿಕಿತ್ಸೆಯ ಕಾರ್ಯಾಗಾರಗಳಲ್ಲಿ ಸಾಂಪ್ರದಾಯಿಕ ದಂಪತಿಗಳ ಜೊತೆಗೆ ಇವರನ್ನೂ 'ದಂಪತಿ' ಎಂದೇ ಲೆಕ್ಕಿಸುತ್ತೇನೆ. ಆಗ ಮಾತ್ರವೇ ದಾಂಪತ್ಯ ಸಮಸ್ಯೆಗಳ ಅಧ್ಯಯನ ಸಮಗ್ರವಾದೀತು.